**SC No. 86/2025**
**PW-3**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 86/2025

| | | |
|---|---|---|
| ಸಾಕ್ಷಿದಾರರ ಹೆಸರು | ಸುಚಿತ್ರ ಸಿಂಗ್ | ಪ್ರಮಾಣ ವಚನ ಮಾಡಿದ ದಿನಾಂಕ: 07.04.2026 |
| ತಂದೆಯ/ಗಂಡನ ಹೆಸರು | ಚಂದು ಆರ್. | |
| ವಯಸ್ಸು | 24 ವರ್ಷ | |
| ವೃತ್ತಿ | ಗೃಹಿಣಿ | ಫ್ರಾ.ಸಾಃ 3 |
| ವಾಸ ಸ್ಥಳ | ಮಾಲರ ಕಾಲೋನಿ | ಚಾ.ಸಾಃ 13 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಫ್ರಾಸಾ–1 ನನಗೆ ತಾಯಿಯಾಗಬೇಕು ಮತ್ತು ನಾಗರಾಜು ನನ್ನ ತಂದೆಯಿದ್ದರು. ನನಗೆ 1 ನೇ ಆರೋಪಿಯ ಮಗ ಚಂದು ಗೊತ್ತು. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರೆಲ್ಲರೂ ಗೊತ್ತು. 1 ನೇ ಆರೋಪಿಯ ಮಗ ಚಂದು ನನ್ನ ಗಂಡ ಇರುತ್ತಾರೆ. ನಾನು ಮತ್ತು ಚಂದು ಈ ಹಿಂದೆ ಒಬ್ಬರಿಗೊಬ್ಬರು ಪ್ರೀತಿಸಿದ ವಿಚಾರದಲ್ಲಿ ಆರೋಪಿತರ ಮತ್ತು ನನ್ನ ತಂದೆಯ ನಡುವೆ ಮಾತುಕತೆ ಆಗಿರುವುದಿಲ್ಲ ಮತ್ತು ಆರೋಪಿತರು ನನ್ನ ತಂದೆಯನ್ನು ಕಂಡಾಗಲೆಲ್ಲಾ ಮಗಳಿಗೆ ಮದುವೆ ಮಾಡದೇ ತಿರುಗಾಡುತ್ತಾನೆ ಈ ಬಾಳು ಬಾಳುವುದಕ್ಕಿಂತ ಏನಾದರೂ ಮಾಡಿಕೊಂಡು ಸಾಯಬಾರದೇ ಎಂದು ಬೈಯುವುದನ್ನು ಮಾಡಿದ್ದನ್ನು ನಾನು ನೋಡಿರುವುದಿಲ್ಲ ಇದೇ

ವಿಚಾರವಾಗಿ ಆರೋಪಿತರು ಮನೆಯ ಹತ್ತಿರ ಬಂದು ಗಲಾಟೆ ಮಾಡಿ ನನ್ನ ತಂದೆಗೆ ಪ್ರಚೋದನೆ ಮಾಡಿರುವುದಿಲ್ಲ ಅದೇ ಕಾರಣಕ್ಕಾಗಿ ನನ್ನ ತಂದೆ ಡೆತ್ ನೋಟ್ ಬರೆದು ನೇಣು ಹಾಕಿಕೊಂಡಿರುವುದಿಲ್ಲ. ನಾನು ಈ ಬಗ್ಗೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ನಾನು ಈಗ ನೋಡುತ್ತಿರುವ ನಿಪಿ–2 ರ ಮೇಲಿರುವ ಸಹಿ ನನ್ನ ತಂದೆಯ ಸಹಿಯೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ನನ್ನ ತಂದೆಯ ಸಾವಿಗೆ ಆರೋಪಿತರೇ ಕಾರಣ ಇರುತ್ತಾರೆ ಎಂದು ಹೇಳಿಕೆ ಕೊಟ್ಟಿರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಮತ್ತು 1 ನೇ ಆರೊಪಿತನ ಮಗ ಚಂದು ಈಗ್ಗೆ ಸುಮಾರು 2 ವರ್ಷದಲ್ಲಿ ಪ್ರೀತಿ ಮಾಡುತ್ತಿದ್ದು ಮನೆ ಬಿಟ್ಟು ಹೋಗಿದ್ದೆವು ಎಂದರೆ ಸರಿ. ನನ್ನ ತಂದೆಯವರು ಹುಡುಕಿ ಚಂದು ಈತನಿಗೆ ಬುದ್ದಿ ಹೇಳಿ ನನಗೆ ಆತನ ಸಹವಾಸಕ್ಕೆ ಹೋಗಬೇಡ ಎಂದು ಹೇಳಿ ನನ್ನನ್ನು ಕರೆದುಕೊಂಡು ಹೋಗಿದ್ದರು ಎಂದರೆ ಸರಿ ಮತ್ತು ಈ ಬಗ್ಗೆ ಊರಿನಲ್ಲಿ ಪಂಚಾಯಿತಿ ಆಗಿತ್ತು ಎಂದರೆ ಸರಿ. ನನಗೆ ಮತ್ತು ಚಂದು ರವರಿಗೆ ತಿಳುವಳಿಕೆ ಹೇಳಿದ್ದರು

ಎಂದರೆ ಸರಿ. ದಿನಾಂಕ 11.11.2021 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ನಾನು, ನನ್ನ ತಂದೆ ಮನೆಯಲ್ಲಿ ಇದ್ದಾಗ ಚಂದು ಮತ್ತು ಇತರ ಆರೋಪಿತರು ಗುಂಪು ಕಟ್ಟಿಕೊಂಡು ನಮ್ಮ ಮನೆಯ ಹತ್ತಿರ ಬಂದು ನನ್ನ ತಂದೆಗೆ ಬಾಯಿಗೆ ಬಂದಂತೆ ಬೈದಿದ್ದರು ಎಂದರೆ ಸರಿಯಲ್ಲ. ನಿನ್ನ ಮಗಳನ್ನು ಮದುವೆ ಮಾಡಿದರೆ ಹಣ ಖರ್ಚು ಆಗುತ್ತದೆ ಎಂದು ತಿಳಿದು ಚಂದುವಿನ ಜೊತೆ ಓಡಿ ಹೋಗಲಿ ದುಡ್ಡೆಲ್ಲಾ ಉಳಿಯುತ್ತದೆ ಎಂದು ಕಾಯುತ್ತಿದ್ದೀಯಾ ಇಂತ ಬಾಳು ಬಾಳುವುದಕ್ಕಿಂತ ಏನಾದರೂ ಮಾಡಿಕೊಂಡು ಸಾಯಿ ಎಂದು ಮನಸ್ಸಿಗೆ ನೋವಾಗುವಂತೆ ಆರೋಪಿತರೆಲ್ಲರೂ ಬೈದಿದ್ದರು ಎಂದರೆ ಸರಿಯಲ್ಲ. ದಿನಾಂಕ 16.11.2021 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಎಲ್ಲಾ ಆರೋಪಿತರು ಪುನಃ ನನ್ನ ತಂದೆಗೆ ಬೈದು ಪ್ರಚೋದನೆ ನೀಡಿದ್ದರು ಎಂದರೆ ಸರಿಯಲ್ಲ. ದಿನಾಂಕ 16.111.2021 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ ನನ್ನ ತಂದೆ ಊಟ ಮಾಡಿ ಮನೆಯ ಮುಂದಿನ ವರಾಂಡದಲ್ಲಿ ಮಲಗಿಕೊಳ್ಳುತ್ತೇನೆ ಎಂದು ಮನೆಯ ಒಳಗಿಂದ ವರಾಂಡಕ್ಕೆ ದಿಂಬು ತೆಗೆದುಕೊಂಡು ಹೋಗಿದ್ದು ನಾನು ಮತ್ತು ತಾಯಿ ಮನೆಯ ಒಳಗೆ ಇದ್ದು 5-10 ನಿಮಿಷದಲ್ಲಿ ಮನೆಯ ಮುಂದಿನ ಬಾಗಿಲು ಹಾಕಲು ಹೊರಗೆ ಬಂದಾಗ ಜೋರಾಗಿ ಕಿರುಚಿಕೊಂಡಿದ್ದು ಮನೆಯ ಒಳಗಿಂದ ನೋಡಲಾಗಿ ತಂದೆ ಚೇರ್ ಮೇಲೆ ನಿಂತುಕೊಂಡು ಪ್ಲಾಸ್ಟಿಕ್ ಹಗ್ಗದಿಂದ ವರಾಂಡದ ಮರದ ತೀರಿಗೆ ನೇಣು ಹಾಕಿಕೊಂಡು ನೇತಾಡುತ್ತಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಯ

ಸಾವಿಗೆ ಆರೋಪಿತರೇ ಕಾರಣ ಇರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ತಂದೆಗೆ ಮಾನಸಿಕ ಹಿಂಸೆ ಕೊಟ್ಟು ಪ್ರಚೋದನೆ ಮಾಡಿದ್ದರಿಂದ ನನ್ನ ತಂದೆ ಮರಣ ಹೊಂದಿದರು ಎಂದು ಈಗ ಓದಿ ಹೇಳಿದ ನಿಪಿ-13 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಈಗ 1 ನೇ ಆರೋಪಿತನ ಮಗ ಚಂದುವನ್ನು ಮದುವೆಯಾಗಿದ್ದು ಆರೋಪಿತರಿಗೆ ತೊಂದರೆ ಆಗಬಾರದು ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**